quickmarketreports.com

Date : 25-11-2015

# ಗೋಡಂಬಿ ಸಂಸ್ಕರಣಾ ಕೇಂದ್ರವಾಗಿ ಬೆಳೆಯುತ್ತಿರುವ ಸೂರತ್

ಟೆಕ್ಸ್‌ಟೈಲ್ ಮತ್ತು ವಜ್ರಗಳ ಕ್ಷೇತ್ರದಲ್ಲಿ ಪ್ರಸಿದ್ಧವಾದ ಸೂರತ್ ಈಗ ಗೋಡಂಬಿ ಸಂಸ್ಕರಣಾ ಕೇಂದ್ರವಾಗಿಯೂ ಹೆಸರು ಗಳಿಸುತ್ತಿದೆ. ಹಿಂದಿನೆರಡು ಮೂರು ವರ್ಷಗಳ ಹಿಂದೆ 10–15 ರಷ್ಟಿದ್ದ ಗೋಡಂಬಿ ಸಂಸ್ಕರಣಾ ಘಟಕಗಳು ಈಗ 200 ಕ್ಕೂ ಹೆಚ್ಚಳವಾಗಿದೆಯೆಂದು ಗೋಡಂಬಿ ಆಮದು ಸಂಸ್ಥೆಯ ಅಜಯ್ ಶರ್ಮಾ ಹೇಳಿದ್ದಾರೆನ್ನಲಾಗಿದೆ. ಆಫ್ರಿಕಾದ ರಾಜ್ಯಗಳಾದ ತಾಂಜಾನಿಯಾ ಮತ್ತು ಕೆನ್ಯಾಗಳಿಂದ ಆಮದು ಮಾಡಿದ ಕಚ್ಚಾ ಗೋಡಂಬಿ ಸಂಸ್ಕರಣೆ ಮಾಡುವ ಕೇಂದ್ರವಾಗಿ ಸೂರತ್ ಬೆಳೆಯುತ್ತಿದೆಯೆನ್ನಲಾಗಿದೆ.

200ಕ್ಕೂ ಮಿಕ್ಕಿದ ಕಚ್ಚಾ ಗೋಡಂಬಿ ಸಂಸ್ಕರಣಾ ಕೇಂದ್ರಗಳು ಸೂರತ್‌ನ ಸುತ್ತಮುತ್ತ ಕಾರ್ಯಾಚರಿಸುತ್ತಿದ್ದು ದಿನವಹಿ 125 ಟನ್ ಕಚ್ಚಾ ಗೋಡಂಬಿ ಸಂಸ್ಕರಿಸಿ 30 ಟನ್ ಗೋಡಂಬಿ ತಿರುಳು, ಹಾಗೂ ವಾರ್ಷಿಕವಾಗಿ 45000 ಟನ್ ಕಚ್ಚಾ ಗೋಡಂಬಿ ಸಂಸ್ಕರಿಸಿ 10000 ಟನ್ ಗೋಡಂಬಿ ತಿರುಳು ಉತ್ಪಾದಿಸಿ, ಸೂರತ್ ನಗರ, ಗುಜರಾತ್, ಹಾಗೂ ಸಮೀಪದ ರಾಜ್ಯಗಳಾದ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳ ಬೇಡಿಕೆಯ ಗೋಡಂಬಿ ತಿರುಳು ಪೂರೈಸುತ್ತಿದ್ದಾರೆನ್ನಲಾಗಿದೆ.